ಮುಖ್ಯಸ್ಥ ಪಿ.ಸಿ. ಮಹಲ್ನೋಬಿಸ್‌ರ ಸಹಿ ಇರುವ, 'ಜನವರಿ 1ರಂದು ತರಬೇತಿಗೆ ಸೇರಿಕೊಳ್ಳಬೇಕು' ಎಂಬ ಆದೇಶ ಕೈಸೇರಿತು. ಗಣಿತದಲ್ಲಿ ಹೆಚ್ಚಿನ ಆಸಕ್ತಿ ಇದ್ದರೂ ಸದ್ಯಕ್ಕೆ ಸ್ಟಾಟಿಸ್ಟಿಕ್ಸ್ ಅಧ್ಯಯನ ಮಾಡಿದರಾಯಿತು ಎಂದು ನಿರ್ಧರಿಸಿ ತರಬೇತಿಗೆ ಹಾಜರಾದ ಆ ಯುವಕ ಮುಂದಿನ ವರ್ಷಗಳಲ್ಲಿ ಇಡೀ ವಿಶ್ವವೇ ಬೆರಗಾಗುವಂತೆ ಸ್ಟಾಟಿಸ್ಟಿಕ್ಸ್ ವಿಷಯದ ಅನೇಕ ಸಿದ್ಧಾಂತ–ನಿಯಮಗಳನ್ನು ರೂಪಿಸಿದ; ದೇಶ ನಡೆಸುವ ನಾಯಕರಿಗೆ, ಯೋಜನೆ ರೂಪಿಸುವ ತಜ್ಞರಿಗೆ ದೊಡ್ಡ ಪ್ರಮಾಣದಲ್ಲಿ ನೆರವಾಗಿ ವಿಶ್ವ ಮಟ್ಟದ ಗೌರವ ಮುಡಿಗೇರಿಸಿಕೊಂಡ. ಆ ಸಾಧಕನ ಹೆಸರು ಡಾ. ಸಿ.ಆರ್. ರಾವ್ – ಕಾಲ್ಯಂಪುಡಿ ರಾಧಾಕೃಷ್ಣ ರಾವ್.

## ಮಿನುಗಿದ ಮೊಳಕೆಯ ಸಿರಿ

ಗಣಿತ ಲೋಕದ ಪಾಲಿಗೆ ಡಾ. ರಾವ್ ಎಂದೇ ಖ್ಯಾತರಾದ ರಾಧಾಕೃಷ್ಣ ರಾವ್ ಅವರು ಹುಟ್ಟಿದ್ದು ಅಂದಿನ ಮದ್ರಾಸ್ ಪ್ರಾಂತ್ಯದಲ್ಲಿದ್ದು, ಈಗ ಕರ್ನಾಟಕದಲ್ಲಿರುವ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ. ಹತ್ತು ಮಕ್ಕಳ ದೊಡ್ಡ ಕುಟುಂಬದಲ್ಲಿ 1920ರ ಸೆಪ್ಟೆಂಬರ್ 10ರಂದು ನಾಯ್ಡು ಮತ್ತು ಲಕ್ಷ್ಮೀಕಾಂತಮ್ಮ ದಂಪತಿಯ ಎಂಟನೇ ಮಗನಾಗಿ ಜನಿಸಿದ ರಾವ್ ಅವರ ಪ್ರಾಥಮಿಕ ವಿದ್ಯಾಭ್ಯಾಸ ನಡೆದದ್ದು ಆಂಧ್ರಪ್ರದೇಶದ ಗುಡೂರು, ನಂದಿಗ್ರಾಮ, ನುಜವಿಡ್‌ಗಳಲ್ಲಿ. ಸಿಐಡಿ ಇನ್‌ಸ್ಪೆಕ್ಟರ್ ಹುದ್ದೆಯಲ್ಲಿದ್ದ ನಾಯ್ಡು ಅವರು ಸೇವೆಯಿಂದ ನಿವೃತ್ತರಾದ ಬಳಿಕ ವಿಶಾಖಪಟ್ಟಣಂನಲ್ಲಿ ನೆಲೆಸಿದರು, ರಾವ್‌ರ ಹೈಸ್ಕೂಲು ಮತ್ತು ಕಾಲೇಜು ಶಿಕ್ಷಣ ಅಲ್ಲಿಯೇ ನಡೆದವು.

ಬಾಲ್ಯದಲ್ಲೇ ಗಣಿತದಲ್ಲಿ ಭಾರೀ ಚುರುಕಾಗಿದ್ದ ರಾವ್, ತಮ್ಮ ಐದನೆಯ ವಯಸ್ಸಿಗೆಲ್ಲಾ ಅಂದಿನ ಕಾಲದ ಹಣಲೆಕ್ಕಾಚಾರದ ಘಟಕಗಳಾದ 'ಆಣೆ', 'ದುಮಡಿ' ಮತ್ತು 'ಕಾಣಿ'ಗಳ ಲೆಕ್ಕಗಳನ್ನು ಕ್ಷಣಮಾತ್ರದಲ್ಲಿ ಬಿಡಿಸುತ್ತಿದ್ದರು. ಮಗನ ಪ್ರತಿಭೆಯನ್ನು ಗುರುತಿಸಿದ್ದ ತಂದೆ, ಭಾಸ್ಕರಾಚಾರ್ಯನ 'ಲೀಲಾವತಿ' ಪುಸ್ತಕ ನೀಡಿ ಸಮಸ್ಯೆಗಳನ್ನು ಬಿಡಿಸಲು ಹೇಳುತ್ತಿದ್ದರು. ಸಮಯ ದೊರೆತಾಗಲೆಲ್ಲ ಗಣಿತದ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸಲು ಉತ್ತೇಜಿಸುತ್ತಿದ್ದರು. ಮಗನನ್ನು ಬೆಳಗಿನ ಜಾವ ನಾಲ್ಕಕ್ಕೇ ಎಬ್ಬಿಸಿ ಓದಲು ಎಣ್ಣೆ ದೀಪವನ್ನು ಹಚ್ಚಿಡುತ್ತಿದ್ದ ತಾಯಿ, ಮಗ ಬೃಹತ್ ಸಾಧನೆ ಮಾಡುತ್ತಾನೆ ಎನ್ನುತ್ತಿದ್ದರು. ಅದು ಸುಳ್ಳಾಗಲಿಲ್ಲ.

ಹದಿನೇಳನೆ ವಯಸ್ಸಿಗೆ ಬಿ.ಎ. ಆನರ್ಸ್ ಪದವಿ ಪಡೆದ ರಾವ್, ಗಣಿತ ಸಂಶೋಧಕನಾಗಬೇಕೆಂಬ ಮಹದಾಸೆ ಹೊಂದಿದ್ದರು. ಸ್ನಾತಕೋತ್ತರ ಪದವಿಗೆ ಅರ್ಜಿ ಹಾಕಿ ಸ್ಕಾಲರ್‌ಶಿಪ್‌ಗಾಗಿ ಕಾದರು. ಎರಡೂ ಸಿಗದಿದ್ದಾಗ ಆರ್ಮಿಯ ಕೆಲಸ ಹುಡುಕಿ ಕಲಕತ್ತೆಗೆ ಹೋದರು. ಆದರೆ, ಅವಕಾಶ ದೊರೆತದ್ದು 'ಇಂಡಿಯನ್ ಸ್ಟಾಟಿಸ್ಟಿಕಲ್ ಇನ್ಸಿಟ್ಯೂಟ್'ನಲ್ಲಿ. ಅಲ್ಲಿಂದ ಮುಂದೆ ಹಿಂದಿರುಗಿ ನೋಡದ ಅವರು, ತಾವು ನಡೆದ ಹಾದಿಯನ್ನು ಗಣಿತ–ಸಂಖ್ಯಾ ವಿಜ್ಞಾನದ ಹೆದ್ದಾರಿಯನ್ನಾಗಿಸಿ ಸ್ಟಾಟಿಸ್ಟಿಕ್ಸ್ ಕ್ಷೇತ್ರದ ಹಲವು ಪ್ರಥಮಗಳನ್ನು ಸಾಧಿಸಿ ತೋರಿಸಿದರು. ಕಲ್ಕತ್ತಾದಲ್ಲಿ ಸುದೀರ್ಘ ನಲವತ್ತು ವರ್ಷಗಳವರೆಗೆ ಸೇವೆ ಸಲ್ಲಿಸಿದರು.

ಸಾಧನೆಯ ಶಿಖರವೇರಿದ ಪ್ರತಿಭೆ

ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆಯುತ್ತಲೇ ಕಲಕತ್ತಾ ವಿವಿಯಿಂದ 1943ರಲ್ಲಿ ಸ್ಟಾಟಿಸ್ಟಿಕ್ಸ್ ವಿಷಯದಲ್ಲಿ ಬಂಗಾರದ ಪದಕದೊಂದಿಗೆ ಪ್ರಥಮ ರ್‍ಯಾಂಕ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅವರು ಅಂದು ಪಡೆದ ಅಂಕಗಳ ದಾಖಲೆಯನ್ನು ಈ ದಿನದವರೆಗೂ ಯಾರೂ ಸರಿಗಟ್ಟಿಲ್ಲ. ಕೇಂಬ್ರಿಡ್ಜ್ ವಿ.ವಿ.ಯ ಭೌತತಜ್ಞ ಮಹಲ್ನೋಬಿಸ್ ಸ್ಥಾಪಿಸಿದ 'ಐಎಸ್‌ಐ'ನಲ್ಲಿ ತರಬೇತಿಗೆ ಸೇರಿಕೊಂಡರು. ನಂತರದ ದಿನಗಳಲ್ಲಿ ಸಂಶೋಧನಾ ವಿದ್ಯಾರ್ಥಿ, ಸ್ಟಾಟಿಸ್ಟಿಕ್ಸ್ ವಿಭಾಗದ ಅಧೀಕ್ಷಕ, ಪ್ರಾಧ್ಯಾಪಕ ಮತ್ತು ಸಂಶೋಧನೆ ಮತ್ತು ತರಬೇತಿ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿದರು. ಮಹಲ್ನೋಬಿಸ್‌ರ ಸಾವಿನ ನಂತರ 'ಐಎಸ್‌ಐ'ನ ನಿರ್ದೇಶಕರಾಗಿ, 'ಜವಹರಲಾಲ್ ನೆಹರು ಪ್ರಾಧ್ಯಾಪಕ ಹುದ್ದೆ'ಯ ಗೌರವ ಮತ್ತು ರಾಷ್ಟ್ರೀಯ ಪ್ರಾಧ್ಯಾಪಕ ಗೌರವಕ್ಕೆ ಪಾತ್ರರಾದರು. ತಮ್ಮ 60ನೇ ವಯಸ್ಸಿನಲ್ಲಿ ನಿವೃತ್ತರಾದರು.

'ಐಎಸ್‌ಐ'ನಲ್ಲಿದ್ದಾಗ 1946ರಲ್ಲಿ ಕೇಂಬ್ರಿಡ್ಜ್ ವಿ.ವಿ.ಯ ಆಹ್ವಾನದ ಮೇರೆಗೆ ಅಲ್ಲಿನ ಮಾನವಿಕ ವಿಜ್ಞಾನ ಮತ್ತು ಪುರಾತತ್ವ ವಿಜ್ಞಾನ ಮ್ಯೂಸಿಯಂನ ಯೋಜನೆಯೊಂದರಲ್ಲಿ ಭಾಗಿಯಾದರು. ಮಹಲ್ನೋಬಿಸ್‌ರ ವಿಧಾನವನ್ನು ಅನುಸರಿಸಿ ಕೆಲಸ ಮಾಡಿ, ಆಧುನಿಕ ಸ್ಟಾಟಿಸ್ಟಿಕ್ಸ್‌ನ ದಾತಾರನೆಂದು ಖ್ಯಾತರಾಗಿದ್ದ ಸರ್ ಆರ್.ಎ. ಫಿಶರ್ ಮಾರ್ಗದರ್ಶನದಲ್ಲಿ 1948ರಲ್ಲಿ ಪಿಎಚ್.ಡಿ. ಪಡೆದರು. ವಿಶೇಷವೆಂದರೆ ಫಿಶರ್



ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿ ಪಡೆದ ಏಕೈಕ ವಿದ್ಯಾರ್ಥಿ ನಮ್ಮ ರಾವ್.

ಗಣಿತ ಮತ್ತು ಸ್ಟಾಟಿಸ್ಟಿಕ್ಸ್ ಕ್ಷೇತ್ರಕ್ಕೆ ರಾವ್ ಅವರು ನೀಡಿದ ಕೊಡುಗೆಯನ್ನು ಗಮನಿಸಿದ ಕೇಂಬ್ರಿಡ್ಜ್ ವಿ.ವಿ. 1965ರಲ್ಲಿ 'ಡಾಕ್ಟರ್ ಆಫ್ ಸೈನ್ಸ್' ಪದವಿಯನ್ನು ನೀಡಿ ಗೌರವಿಸಿತು. 1953ರಿಂದ 1979ರವರೆಗೆ ಅಮೆರಿಕದ ಓಹಿಯೋ, ಜಾನ್ ಹಾಪ್‌ಕಿನ್ಸ್, ಇಂಡಿಯಾನಾ, ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ದುಡಿದರು. 'ಐಎಸ್‌ಐ'ನಿಂದ ನಿವೃತ್ತರಾದ ನಂತರ, ಅಮೆರಿಕದ ಪಿಟ್ಸ್‌ಬರ್ಗ್ ಯೂನಿವರ್ಸಿಟಿಯಲ್ಲಿ 25 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ತಮ್ಮ 85ನೇ ವಯಸ್ಸಿನಲ್ಲಿ ನಿವೃತ್ತರಾದರು. ಇಷ್ಟೆಲ್ಲಾ ಸಾಧಿಸಿದ ರಾವ್ ಅವರು, 'ಗಣಿತ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವ ಅವಕಾಶ ಸಿಗದೇ ಇದ್ದುದರಿಂದ ಆಕಸ್ಮಿಕವಾಗಿ ಸ್ಟಾಟಿಸ್ಟಿಕ್ಸ್ ಕ್ಷೇತ್ರಕ್ಕೆ ಬಂದೆ' ಎಂದು ತಮ್ಮ ಜೀವನ ಕಥನದಲ್ಲಿ ಹೇಳಿಕೊಂಡಿದ್ದಾರೆ.

## ಉನ್ನತ ಕೊಡುಗೆ

ಅಂಕಿ–ಅಂಶ ವಿಜ್ಞಾನದಲ್ಲಿ 70 ವರ್ಷಗಳ ರಚನಾತ್ಮಕ ಕೆಲಸ ಮಾಡಿದ ರಾವ್ ಅವರು, ಮಾನವ ಜೀವನದ ಮೇಲೆ ಪರಿಣಾಮ ಬೀರುವ ಹಲವು ಕ್ಷೇತ್ರಗಳಿಗೆ ತಮ್ಮ ಸಂಶೋಧನೆಗಳಿಂದ ನೆರವಾಗಿದ್ದಾರೆ. ಆರ್ಥಿಕ ಯೋಜನೆ, ಹವಾಮಾನ ಮುನ್ಸೂಚನೆ, ರೋಗ ಪತ್ತೆ ವಿಧಾನ, ಗುಪ್ತಚರ ವಿಮಾನಗಳ ಚಲನವಲನ, ತ್ವರಿತವಾಗಿ ಏರುತ್ತಿರುವ ಜನಸಂಖ್ಯೆ, ಹಬ್ಬುತ್ತಿರುವ ರೋಗಗಳು, ಏರುಪೇರಾಗುತ್ತಿರುವ ಹವಾಮಾನ, ಬೆಳೆಯ ಇಳುವರಿ ವ್ಯತ್ಯಾಸ, ಹಣದುಬ್ಬರ, ಬಡತನ, ಆರೋಗ್ಯ, ಉದ್ಯೋಗ, ಶಿಕ್ಷಣ, ಅಗತ್ಯ ವಸ್ತುಗಳ ಬೇಡಿಕೆ, ಸರಬರಾಜು, ಅಂತರಿಕ್ಷ ನೌಕೆಗಳ ಉಡಾವಣೆ ಮತ್ತು ಚಲನವಲನಗಳ ಮೇಲೆ ನಿಗಾದಂಥ ಬಹುಮುಖ್ಯ ವಿಷಯಗಳಿಗೆ ಅವರ ಸಂಶೋಧನೆಗಳು ಸಮಾಧಾನ ಮತ್ತು ಪರಿಹಾರ ಕಲ್ಪಿಸುತ್ತವೆ.

ಈಗ ಇಡೀ ಜಗತ್ತನ್ನು ತಲ್ಲಣಿಸಿ ಹಾಕಿರುವ ಕೊರೊನಾ ಪಿಡುಗಿನ ನಿಯಂತ್ರಣ, ರೋಗಿಗಳ ಸಂಖ್ಯೆ, ಸಾವಿನ ಏರಿಕೆ, ಚಿಕಿತ್ಸಾ ವ್ಯವಸ್ಥೆ, ಔಷಧಿಯ ಲಭ್ಯತೆ, ಹಣಕಾಸಿನ ನೆರವು ಮುಂತಾದ ಹಲವು ವಿಷಯಗಳ ವಸ್ತುನಿಷ್ಠ ಲೆಕ್ಕಾಚಾರಕ್ಕೆ ಸ್ಟಾಟಿಸ್ಟಿಕ್ಸ್‌ನ ಬಳಕೆ ಹೆಚ್ಚಾಗಿ ನಡೆಯುತ್ತಿದೆ. ರಾವ್ ಅವರು ಹೇಳುವ ಪ್ರಕಾರ, 2026ರ ವೇಳೆಗೆ ಸಾಮಾನ್ಯ ಜೀವನದಲ್ಲಿ ಸ್ಟಾಟಿಸ್ಟಿಕ್ಸ್‌ನ ಬಳಕೆ ಶೇಕಡಾ 36ರಷ್ಟು ಹೆಚ್ಚಲಿದೆ.

'ಕ್ರಾಮರ್‌ರಾ–ವ್ ಇನ್ ಈಕ್ವಾಲಿಟಿ', 'ರಾವ್–ಬ್ಲಾಕ್‌ವೆಲೈಜೇಶನ್', 'ಫಿಶರ್–ರಾವ್‌ಥೇರಂ', 'ರಾವ್‌ಡಿಸ್ಟೆನ್ಸ್', 'ರಾವ್ ಆರ್ಥೋಗೊನಲ್ ಅರೇಸ್', 'ಮಲ್ಟಿವೇರಿಯೇಟ್ ಅನಾಲಿಸಿಸ್ ಆಫ್ ವೇರಿಯೆನ್ಸ್' – ಹೀಗೆ ಹಲವಾರು ಅತ್ಯುಪಯುಕ್ತ ಸಂಖ್ಯಾ ವಿಜ್ಞಾನದ ಸಲಕರಣೆಗಳನ್ನು ನೀಡಿರುವ ರಾವ್ ಅವರ ಅನೇಕ ಸಂಶೋಧನಾ ಪ್ರಬಂಧಗಳು ಭಾರತದ ವಿವಿಗಳಲ್ಲಿ ಗಣಿತ–ಸ್ಟಾಟಿಸ್ಟಿಕ್ಸ್‌ನ ಸಿಲಬಸ್‌ಗಳಾಗಿವೆ. ಇಂಜಿನಿಯರಿಂಗ್, ಎಕನೋಮಿಟ್ರಿಕ್ಸ್, ಬಯೋಮೆಟ್ರಿಕ್ಸ್, ಸ್ಟಾಟಿಸ್ಟಿಕ್ಸ್‌ನ ಪಠ್ಯಪುಸ್ತಕಗಳಲ್ಲಿ ಅವರ ಹೆಸರಿಲ್ಲದ ಪಾಠವೇ ಇಲ್ಲ. ವಿಶ್ವದ ಸ್ಟಾಟಿಸ್ಟಿಕಲ್ ನಕ್ಷೆಯಲ್ಲಿ ಭಾರತ ಕೇಂದ್ರ ಸ್ಥಾನದಲ್ಲಿರಬೇಕೆಂದು ನಿರ್ಧರಿಸಿ ಹಲವು ತರಬೇತಿ ಮತ್ತು ಸಂಶೋಧನಾ ಕೋರ್ಸ್‌ಗಳನ್ನು ರೂಪಿಸಿದ ರಾವ್ ಅವರು, ವಿಶ್ವಸಂಸ್ಥೆಯ ಸ್ಟಾಟಿಸ್ಟಿಕ್ಸ್ ವಿಭಾಗದ ಅಧ್ಯಕ್ಷರಾಗಿದ್ದಾಗ ಏಷ್ಯಾದ ದೇಶಗಳಿಗೆಂದೇ ಪ್ರತ್ಯೇಕ ಸ್ಟಾಟಿಸ್ಟಿಕ್ಸ್ ಸಂಸ್ಥೆಯ